# ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.

## ಸಿ.ಸಿ. ನಂ. 3/2021

| ಫಿರ್ಯಾದಿಃ- | ವಿರುದ್ಧ | ಆರೋಪಿಃ- |
|---|---|---|
| ಶ್ರೀ ಹರಿ ಟ್ರೇಡರ್ಸ್ ಸಿಮೆಂಟ್ ಡೀಲರ್ಸ್ ಮಾಲೀಕರು ಶ್ರೀಮತಿ ಸುರೇಖಾ ಎಸ್, ಮಹಾಲೆ ಕೋಂ ಸುರೇಂದ್ರ ರಾಮ ಮಹಾಲೆ, ವಯಸ್ಸು ಸುಮಾರು 70 ವರ್ಷ, ವಾಸಃ ರಶಿಯನ್ ಕಾಲೋನಿ ರಸ್ತೆ, ಕಾರ್ಗಲ್ ಟೌನ್, ಸಾಗರ ತಾಲ್ಲೂಕು. | | 1) ಶರ್ವಾಣಿ ಅಸೋಸಿಯೇಟ್ಸ್ ಪಾಲುದಾರಿಕೆ ಸಂಸ್ಥೆ,<br>2) ಶ್ರೀ ಮೊಹಮ್ಮದ್ ಬೈಂಡಾಡಿ ಹೌಸ್ ಇಕ್ಬಾಲ್ ಪಾಲುದಾರರು ಶರ್ವಾಣಿ ಅಸೋಸಿಯೇಟ್ಸ್<br>3) ಶ್ರೀ ಭರತರಾಜ ಪಾಲುದಾರರು ಶರ್ವಾಣಿ ಅಸೋಸಿಯೇಟ್ಸ್<br>4) ಅಕ್ಷತ್ ಕುಂಬ್ಳೆ ಪಾಲುದಾರರು ಶರ್ವಾಣಿ ಅಸೋಸಿಯೇಟ್ಸ್<br>5) ಶ್ರೀ ಪ್ರದೀಪ ಕುಮಾರ್ ಪನಕಟ್ಟೆಲ ಪಾಲುದಾರರು ಶರ್ವಾಣಿ ಅಸೋಸಿಯೇಟ್ಸ್<br><br>ಆರೋಪಿತರೆಲ್ಲರೂ, ನಂ.4-12/7 ಶ್ರೀ ದುರ್ಗಾ ಕಾಂಪ್ಲೆಕ್ಸ್, ಕುಳಾಯ, ಮಂಗಳೂರು-575019. |

## ಆಪಾದನೆ

ಪಿರ್ಯಾದಿಯು ಸಾಗರ ತಾಲ್ಲೂಕು, ಕಾರ್ಗಲ್ ಪಟ್ಟಣದಲ್ಲಿ ಶ್ರೀ ಹರಿ ಟ್ರೇಡರ್ಸ್ಎಂಬ ಹೆಸರಿನಲ್ಲಿ ಸ್ವಂತ ಮಾಲೀಕತ್ವದ ನೆಲೆಯಲ್ಲಿ ಸಿಮೆಂಟ್ ವ್ಯಾಪಾರ ಮಾಡುತ್ತಿದ್ದು, ಆರೋಪಿಗಳು 1 ನೇ ಆರೋಪಿ ಹೆಸರಿನಲ್ಲಿ ನೊಂದಣಿತ ಪಾಲುಗಾರಿಕೆ ಸಂಸ್ಥೆಯನ್ನು ಹೊಂದಿದ್ದು, ಕಳೆದ 2019 ನೇ ಇಸವಿಯಲ್ಲಿ ಮೇ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ಒಟ್ಟು 19 ಭಾರಿ ಉದ್ರಿ ಮೇಲೆ ರೂ. 35,34,912/- ಗಳ ಸಿಮೆಂಟ್‌ನ್ನು ಪಿರ್ಯಾದುದಾರರಿಂದ ಖರೀದಿಸಿದ್ದು, ಈ ಕುರಿತು ಒಟ್ಟು 6 ಭಾರಿ ಸಿಮೆಂಟ್ ಖರೀದಿ ಮೊತ್ತದ ಭಾಗಶಃ ಹಣ ಮರು ಪಾವ್ತಿ ಬಗ್ಗೆ ಚೆಕ್ ಮೂಲಕ ರೂ.16,00,000/- ಹಣ ಪಾವ್ತಿ ಮಾಡಿದ್ದು ಇದೆ, ಈ ಬಾಬ್ತು ಬಾಕಿ ರೂ. 19,34,912/- ಗಳನ್ನು ಪಾವತಿಸುವಂತೆ ಪಿರ್ಯಾದಿಯು ಅನೇಕ ಬಾರಿ ಒತ್ತಾಯಿಸುತ್ತಾ ಬಂದಿರುತ್ತಾರೆ, ನಂತರ, ಸಕಾಲದಲ್ಲಿ ನೀವು ಹಣ ಪಾವತಿಸದೇ ಇದ್ದುದ್ದರಿಂದ, ಪಿರ್ಯಾದುದಾರರು ಸಾಲವನ್ನು ಮರುಪಾವತಿಸುವಂತೆ ಕೇಳಿದಾಗ, ದಿನಾಂಕಃ08.10.2020

ರಂದು ನೀವು ನಿಮ್ಮ ಖಾತೆ ಇರುವ ಮಂಗಳೂರು ಕೆನರಾ ಬ್ಯಾಂಕ್, ಪಡುಬಿದ್ರಿ ಶಾಖೆಗೆ ಸೇರಿದ ಖಾತೆ ಚೆಕ್ ನಂ. 130577 ರ ಮೇಲೆ ರೂ.5,00,000/-ರೂ ಗಳನ್ನು ದಿನಾಂಕಃ08.10.2020 ರಂದು ನಗಧೀಕರಿಸಿಕೊಳ್ಳುವಂತೆ ನಮೂದಿಸಿ ಅದಕ್ಕೆ ಸಹಿ ಮಾಡಿ ನೀಡಿರುತ್ತಾರೆ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂದು ತಿಳಿದಿದ್ದರೂ ಕೂಡ ನಗಧೀಕರಿಸಲು ನೀಡಿರುತ್ತೀರಿ.

ನಂತರ, ಫಿರ್ಯಾದುದಾರರು ಆರೋಪಿ ನೀಡಿದ ಚೆಕ್ಕನ್ನು ತಮ್ಮ ಖಾತೆ ಇರುವ ಕಾರ್ಗಲ್, ಕೆನರಾ ಬ್ಯಾಂಕ್ ಗೆ ಹಾಜರುಪಡಿಸಿದಾಗ ನೀವು ನೀಡಿದ ಚೆಕ್ಕನ್ನು ದಿನಾಂಕಃ 23.10.2020 ರಂದು ನಗಧೀಕರಿಸಲು ಸಲ್ಲಿಸಿದಾಗ ಆರೋಪಿತರ ಬ್ಯಾಂಕ್ ಖಾತೆಯಲ್ಲಿ ಸೂಕ್ತ ಪ್ರಮಾಣದ ಹಣ ಇಲ್ಲವೆಂದು ಅಮಾನ್ಯಗೊಂಡು ಅದೇ ದಿನ ಅಂದರೆ ದಿನಾಂಕಃ 23.10.2020 ರಂದು ಪಿರ್ಯಾದುದಾರರಿಗೆ ಮರಳಿ ನೀಡಿರುತ್ತಾರೆ. ನಿಮ್ಮ ಖಾತೆಯಲ್ಲಿ ಹಣ ಇಲ್ಲ ಎನ್ನುವ ವಿಚಾರ ಪಿರ್ಯಾದಿದಾರರಿಗೆ ತಿಳಿದ ನಂತರ, ದಿನಾಂಕಃ 02.11.2020 ರಂದು ಆರೋಪಿಗೆ ತನ್ನ ವಕೀಲರಿಂದ ಅಂಚೆ ನೊಂದಣಿ ಮೂಲಕ ನೋಟಿಸ್ ಕಳುಹಿಸಿದ್ದು, ಸದರಿ ನೋಟೀಸು ಆರೋಪಿಗೆ ದಿನಾಂಕಃ17.11.2020 ರಂದು ಖುದ್ದು ಜಾರಿ ಆಗಿರುತ್ತದೆ. ಆದರೂ ಸಹಾ ನೀವು ಈ ವರೆಗೂ ಚೆಕ್ಕಿನ ಹಣವನ್ನು ನೀಡಿರುವುದಿಲ್ಲ, ಮತ್ತು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬುದನ್ನು ತಿಳಿದಿದ್ದರೂ, ಫಿರ್ಯಾದುದಾರರಿಗೆ ಮೋಸ, ವಂಚನೆ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ನೀಡಿ, ಆ ಮೂಲಕ ನೀವು, ಎನ್. ಐ. ಆಕ್ಟ್ ಕಲಂ 138 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಎಂದು ಈ ಮೂಲಕ ಆಪಾದಿಸಲಾಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 25.06.2025 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

ಪ್ರಶ್ನೆ 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ದೀಪ ಕೆ.ಆರ್)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.